ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	180
ಮಾನ್ಯ ಸದಸ್ಯರ ಹೆಸರು	ಶ್ರೀ.ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ:	13.09.2021
ಉತ್ತರಿಸುವ ಸಚಿವರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಸರಬರಾಜು ಮಾಡಿದ್ದರೂ, ಒಂದೆರಡು ಗಂಟೆಗಳಲ್ಲಿ ಲಸಿಕೆ ಖಾಲಿಯಾಗಿ ಜನರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ತೊಂದರೆಯನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಹೌದು ಜನರಿಗೆ ಲಸಿಕಾಕರಣವನ್ನು ಸುಗಮವಾಗಿ ನಡೆಸಲು ಮತ್ತು ಲಸಿಕೆ ಪಡೆಯುವಲ್ಲಿನ ತೊಂದರೆಗಳನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ: • ಭಾರತ ಸರ್ಕಾರದಿಂದ ಸರಬರಾಜಾದ ಲಸಿಕೆಗಳನ್ನು ಜಿಲ್ಲೆಗಳಲ್ಲಿರುವ ಫಲಾನುಭವಿಗಳ ಸಂಖ್ಯೆ, ಲಸಿಕಾ ದಾಸ್ತಾನಿನ ಆಧಾರದ ಮೇಲೆ ಹಂಚಲಾಗುತ್ತಿದೆ. • ಲಸಿಕಾ ಕೇಂದ್ರಗಳಲ್ಲಿ ಜನ ಸಂಧಣಿಯನ್ನು ನಿಯಂತ್ರಿಸಲು ಟೋಕನ್ ವ್ಯವಸ್ಥೆ ಕಲ್ಪಿಸಲಾಗಿದೆ. • ಜಿಲ್ಲೆಗಳಲ್ಲಿ ಲಭ್ಯವಿರುವ ಲಸಿಕೆ, ಪ್ರತಿದಿನ ಲಸಿಕಾಕರಣ ನಡೆಸುತ್ತಿರುವ ಲಸಿಕಾ ಕೇಂದ್ರಗಳ ವಿವರ ಮತ್ತು ಲಸಿಕಾ ಸ್ಲಾಟ್ಗಳನ್ನೂ ಸದರಿ ಜಿಲ್ಲೆಗಳ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಲಾಗುತ್ತಿದೆ.
ಆ	ಕೋವಿಡ್-19 ರೂಪಾಂತರ 3ನೇ ಅಲೆ ಹರಡುವ ಮುಂಚೆಯೇ, ಸರ್ಕಾರ ಎಚ್ಚೆತ್ತು ರಾಜ್ಯದ ಎಲ್ಲಾ ಜನರಿಗೆ ಲಸಿಕೆ ಪೂರೈಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಕೋವಿಡ್ ಲಸಿಕಾಕರಣ ತೀವ್ರಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ: • ಲಸಿಕಾಕರಣದ ಕಡಿಮೆ ಪ್ರಗತಿ ಹೊಂದಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ನಿಯಮಿತವಾಗಿ ಸಭೆ ನಡೆಸಿ, ಲಸಿಕಾಕರಣದ ಪ್ರಗತಿ ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ. • ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಭೆ ನಡೆಸಲಾಗುತ್ತಿದೆ ಹಾಗೂ ಸದರಿ ಸಭೆಯಲ್ಲಿ ಜಿಲ್ಲೆಗಳಲ್ಲಿನ ಲಸಿಕಾಕರಣದ ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ. • ರಾಜ್ಯವು ಪ್ರತಿದಿನ 5 ರಿಂದ 6 ಲಕ್ಷ ಲಸಿಕಾ ಡೋಸ್ ಗಳನ್ನು ನೀಡುವ ಗುರಿಯನ್ನು ಹೊಂದಿದೆ. • ಪ್ರತಿ ಬುಧವಾರದಂದು ಲಸಿಕಾ ಮೇಳವನ್ನು ನಡೆಸಲಾಗುತ್ತಿದೆ. ಪ್ರತಿ ಲಸಿಕಾ ಮೇಳದಲ್ಲಿ 10 ರಿಂದ 12 ಲಕ್ಷ ಲಸಿಕಾ ಡೋಸ್ ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡುವ ಗುರಿಯನ್ನು ರಾಜ್ಯವು ಹೊಂದಿದೆ ಹಾಗೂ ಅದರಂತೆ ಜಿಲ್ಲೆಗಳಿಗೆ ಗುರಿ ನಿಗದಿ ಪಡಿಸಲಾಗುತ್ತಿದೆ.

		• ಸದರಿ ಗುರಿಯನ್ನು ಸಾಧಿಸಲು ಜಿಲ್ಲಾ ಮಟ್ಟದಲ್ಲಿ ಸೂಕ್ಷ್ಮ ಕ್ರಿಯಾ ಯೋಜನೆಯನ್ನು ತಯಾರಿಸಿ ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. • ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ 2 ನೇ ಡೋಸ್ ಗೆ ಬಾಕಿ ಇರುವ ಫಲಾನುಭವಿಗಳಿಗೆ ಆದ್ಯತೆ ನೀಡಿ ಲಸಿಕೆ ಲಭ್ಯತೆ ಆಧಾರದ ಮೇಲೆ ಲಸಿಕಾಕರಣ ನಡೆಸಲಾಗುತ್ತಿದೆ.
ಇ	ಕೆ.ಆರ್.ಪೇಟೆ ತಾಲ್ಲೂಕು ಹೊಸಹೊಳಲು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಳೇ ರೋಗಿಗಳ ಜೊತೆ ಹೊಸ ರೋಗಿಗಳನ್ನು ಸೇರಿಸುತ್ತಿರುವ ಕಾರಣ, ಎಷ್ಟು ದಿನ ಕಳೆದರೂ ಹಳೆ ರೋಗಿಗಳಿಗೆ ಕೋವಿಡ್-19 ನೆಗೆಟಿವ್ ರಿಪೋರ್ಟ್ ಬರುತ್ತಿಲ್ಲ ಹಾಗೂ ಇದು ಕೇವಲ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಮಾತ್ರವಲ್ಲ ರಾಜ್ಯದ ಇನ್ನಿತರೆ ಕೇಂದ್ರಗಳಲ್ಲಿಯೂ ಈ ಸಮಸ್ಯೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ
F	ಈ ಸಮಸ್ಯೆಗಳನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ಸಮಸ್ಯೆಗಳನ್ನು ಎಷ್ಟು ಕಾಲಮಿತಿಯಲ್ಲಿ ಸರಿಪಡಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು.	ಅನ್ವಯಿಸುವುದಿಲ್ಲ

ಆಕುಕ 95 ಎಸ್‌ಎಂಎಂ 2021

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು